9|2|18

VCS 38

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 288(344)
ವಿಧಾನ ಪರಿಷತ್ ಸದಸ್ಯರ ಹೆಸರು : ಡಾ॥ ಜಯಮಾಲ ರಾಮಚಂದ್ರ(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 09-02-2018(ಕಾಲಾವಕಾಶ ಪಡೆಯಲಾದ ಪ್ರಶ್ನೆ)
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಸ್ಥಾಪನೆಯ ಉದ್ದೇಶದ ಬಗ್ಗೆ ವಿವರ ನೀಡುವುದು; | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2016ರ ಕರ್ನಾಟಕ ಅಧಿನಿಯಮ ಸಂಖ್ಯೆ 16ರ ಅಡಿಯಲ್ಲಿ ಸ್ಥಾಪಿತಗೊಂಡಿದೆ. ಈ ವಿಶ್ವವಿದ್ಯಾಲಯವು ರಾಷ್ಟ್ರದಲ್ಲಿಯೇ ಪ್ರಥಮ ಪ್ರಯೋಗವಾಗಿದ್ದು ವಿಶಿಷ್ಟವಾದ ಸಂಸ್ಥೆಯಾಗಿದೆ. ವಿಶ್ವವಿದ್ಯಾಲಯವು ಬದ್ಧತೆಯುಳ್ಳ ಸಮರ್ಪಣಾ ಮನೋಭಾವದ ಜನ ಸಮುದಾಯವನ್ನು ಸೃಷ್ಟಿಸುವುದರ ಮೂಲಕ ಗ್ರಾಮಗಳ ಬಡತನ ನಿರ್ಮೂಲನೆ, ಕೌಶಲ್ಯಾಭಿವೃದ್ಧಿ ಮೂಲಕ ಉದ್ಯೋಗವಕಾಶಗಳನ್ನು ಸೃಷ್ಟಿಸಿ ಗ್ರಾಮ ಸಮಾಜವನ್ನು ಸುಸ್ಥಿರ ಗ್ರಾಮಾಭಿವೃದ್ಧಿಯತ್ತ ಪರಿವರ್ತಿಸುವ ಉತ್ಕೃಷ್ಟ ಕೇಂದ್ರವಾಗಿ ಕಾರ್ಯ ನಿರ್ವಹಿಸುವ ಉದ್ದೇಶವನ್ನು ಹೊಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯತ ರಾಜ್ ಸಂಸ್ಥೆಗಳನ್ನು ಬಲಪಡಿಸುವ, ಮತ್ತು ಜನರು ತಮ್ಮ ಕಲ್ಯಾಣವನ್ನು, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ತಾವೇ ನಿರ್ಧರಿಸುವುದರ ಮೂಲಕ ಪ್ರಗತಿ ಸಾಧಿಸಬೇಕಾಗಿದೆ. ವಿಶ್ವವಿದ್ಯಾಲಯವು ಗ್ರಾಮೀಣ ಜನರಲ್ಲಿ ಸ್ವಯಂ ಆಡಳಿತ ನಡೆಸಲು ಅನುಕೂಲವಾಗುವಂತೆ ತರಬೇತಿ, ಬೋಧನೆ ಮತ್ತು ಸಂಶೋಧನೆಗಳ ಮೂಲಕ ಗ್ರಾಮಗಳ ಒಟ್ಟಾರೆ ವಿಕಾಸಕ್ಕೆ ತೊಡಗಿಸಿಕೊಳ್ಳುವುದು, ವಿಶ್ವವಿದ್ಯಾಲಯವು ಕೃಷಿ ಉದ್ದಿಮೆಗಳನ್ನು ಗ್ರಾಮೀಣ ಜನರಿಗೆ ಪರಿಚಯಿಸುವುದು ಮತ್ತು ಪ್ರಾತ್ಯಕ್ಷಿಕೆಗಳನ್ನು ಒದಗಿಸುವ ಕೇಂದ್ರವನ್ನಾಗಿ ಮತ್ತು ಗ್ರಾಮೀಣಾಭಿವೃದ್ಧಿಗೆ ತಾಂತ್ರಿಕ ಕೇಂದ್ರವನ್ನಾಗಿಸುವುದರ ಮೂಲಕ ಉನ್ನತ ಮಟ್ಟದ ಶೈಕ್ಷಣಿಕ ಕೇಂದ್ರವಾಗುವ ಉದ್ದೇಶವನ್ನು ಹೊಂದಿದೆ. |
| (ಆ) | ಈ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಕೋರ್ಸುಗಳ ವಿವರ ಮತ್ತು ಈ ಕೋರ್ಸುಗಳಿಗೆ ಸೇರಲು ಬೇಕಾಗಿರುವ ಅರ್ಹತೆ ಬಗ್ಗೆ ವಿವರ ನೀಡುವುದು; | ವಿಶ್ವವಿದ್ಯಾಲಯದ ಪ್ರಾರಂಭದ ವರ್ಷ 2017-18 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಐದು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.<br>6) ಎಂ.ಬಿ.ಎ- ಗ್ರಾಮೀಣ ನಿರ್ವಹಣೆ, ಕೃಷಿ ವ್ಯವಹಾರ ನಿರ್ವಹಣೆ/ಗ್ರಾಮೀಣಾಭಿವೃದ್ಧಿ / ಉದ್ಯಮಶೀಲತೆ ನಿರ್ವಹಣೆ ವಿಶೇಷತೆಯೊಂದಿಗೆ.<br>7) ಎಂ.ಎ- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್/ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರಿ ನಿರ್ವಹಣೆ<br>8) ಎಂ.ಎಸ್ಸಿ- ಜಿಯೋಇನ್ಫಾರ್‌ಮೆಟಿಕ್ಸ್<br>9) ಎಂ.ಎಸ್.ಡಬ್ಲ್ಯೂ- ಸಮುದಾಯ ಅಭಿವೃದ್ಧಿ/ಗ್ರಾಮೀಣ ಪುನರ್ ನಿರ್ಮಾಣ<br>10) ಎಂ.ಕಾಂ- ಉದ್ಯಮಶೀಲತೆ / ಸಹಕಾರಿ ನಿರ್ವಹಣೆ<br>ಪ್ರವೇಶ ಅರ್ಹತೆಗಳನ್ನು ಅನುಬಂಧ - 1ರಲ್ಲಿ ಕೊಡಲಾಗಿದೆ. |

9/2/18

U/S
76

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 326(389)
ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 09-02-2018(ಕಾಲಾವಕಾಶ ಪಡೆಯಲಾದ ಪ್ರಶ್ನೆ)
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯಕ್ಕೆ ಎಷ್ಟು ಎಕರೆ ಭೂಮಿಯನ್ನು ಒದಗಿಸಿರುತ್ತದೆ; ಸದರಿ ವಿಶ್ವವಿದ್ಯಾಲಯವನ್ನು ಎಲ್ಲಿ ಮತ್ತು ಯಾವ ಶೈಕ್ಷಣಿಕ ವರ್ಷದಿಂದ ತೆರೆಯಲಾಗುವುದು; | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯಕ್ಕೆ ಸದ್ಯಕ್ಕೆ 353.12 ಎಕರೆ ಭೂಮಿಯನ್ನು ಗುರುತಿಸಲಾಗಿದ್ದು ಈಗಾಗಲೇ ಸುಮಾರು 218 ಎಕರೆ ಜಮೀನನ್ನು ನೀಡಲಾಗಿದ್ದು ಉಳಿದ ಭೂಮಿಯನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ. ಪ್ರಸ್ತುತ, ವಿಶ್ವವಿದ್ಯಾಲಯವನ್ನು ಗದಗ ನಗರದ ಐತಿಹಾಸಿಕ ಕಟ್ಟಡ 'ರೈತ ಭವನ' ದಲ್ಲಿ 2017-18 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿದೆ. |
| (ಆ) | ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯಕ್ಕೆ ಉಪ ಕುಲಪತಿಗಳು, ಕುಲ ಸಚಿವರು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ; ನೇಮಿಸದೇ ಇದ್ದಲ್ಲಿ ಈ ಸಿಬ್ಬಂದಿಯನ್ನು ತುಂಬಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಸದರಿ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಕುರಿತು ರಾಜ್ಯ ಸರ್ಕಾರ ಯೋಜನೆಯನ್ನು ರೂಪಿಸಿರುತ್ತದೆಯೇ; | ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳು(ಕುಲಪತಿ) ಮತ್ತು ಕುಲಸಚಿವರನ್ನು ಪೂರ್ಣಕಾಲಿಕವಾಗಿ ನೇಮಿಸಲಾಗಿದೆ. ಹಾಲಿ 2017-18 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿರುವ ಐದು ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸಲು 08 ಹಿರಿಯ ಹಾಗೂ ಆಯಾ ಕ್ಷೇತ್ರಗಳಲ್ಲಿ ಧೀರ್ಘಕಾಲ ಸೇವೆ ಸಲ್ಲಿಸಿ ಖ್ಯಾತಿಗಳಿಸಿರುವ ಬೋಧಕ ಸಿಬ್ಬಂದಿಯನ್ನು ಸಂದರ್ಶಕ/ಗೌರವ/ಎಮಿರೇಟಸ್ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಗಿದೆ. ಅಲ್ಲದೆ ಸಾಕಷ್ಟು ಸಂಖ್ಯೆಯ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಬೋಧಕರನ್ನು ನೇಮಕ ಮಾಡಲಾಗಿದೆ.<br><br>ಆಡಳಿತ, ಹಣಕಾಸು, ಗ್ರಂಥಾಲಯ, ಹಾಸ್ಟೇಲ್‌ಗಳು, ಅತಿಥಿಗೃಹ ನಿರ್ವಹಣೆ ಮುಂತಾದ ಕಾರ್ಯಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಅಗತ್ಯವಾದ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ.<br><br>ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಅಗತ್ಯವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗುತ್ತಿದೆ. ಇವುಗಳಿಗೆ ಸರ್ಕಾರ ಮತ್ತು ಕುಲಾಧಿಪತಿಗಳ ಅನುಮೋದನೆ ಪಡೆದು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016 ರಲ್ಲಿ ನಿಯಮಿತವಾಗಿರುವಂತೆ ಶೈಕ್ಷಣಿಕ, ಸಂಶೋಧನೆ ಮತ್ತು ತರಬೇತಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ವಿಶ್ವವಿದ್ಯಾಲಯ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಈಗಾಗಲೇ 2017-18 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಐದು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.<br><br>1) ಎಂ.ಬಿ.ಎ- ಗ್ರಾಮೀಣ ನಿರ್ವಹಣೆ, ಕೃಷಿ ವ್ಯವಹಾರ ನಿರ್ವಹಣೆ/ ಗ್ರಾಮೀಣಾಭಿವೃದ್ಧಿ / ಉದ್ಯಮಶೀಲತೆ ನಿರ್ವಹಣೆ ವಿಶೇಷತೆಯೊಂದಿಗೆ.<br>2) ಎಂ.ಎ- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್/ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರಿ ನಿರ್ವಹಣೆ<br>3) ಎಂ.ಎಸ್ಸಿ.- ಜಿಯೋಇನ್ಫಾರ್‌ಮೆಟಿಕ್ಸ್<br>4) ಎಂ.ಎಸ್.ಡಬ್ಲ್ಯೂ- ಸಮುದಾಯ ಅಭಿವೃದ್ಧಿ/ಗ್ರಾಮೀಣ ಪುನರ್ ನಿರ್ಮಾಣ<br>5) ಎಂ.ಕಾಂ- ಉದ್ಯಮಶೀಲತೆ / ಸಹಕಾರಿ ನಿರ್ವಹಣೆ<br><br>ಮುಂಬರುವ ಶೈಕ್ಷಣಿಕ ವರ್ಷದಿಂದ ಇನ್ನೂ ಹಲವಾರು ಸ್ನಾತಕೋತ್ತರ, ಸರ್ಟಿಫಿಕೇಟ್, ಡಿಪ್ಲೊಮಾ, ಮತ್ತು ಪಿ. ಜಿ. ಡಿಪ್ಲೊಮಾ ಕೋರ್ಸುಗಳನ್ನು ಹಾಗೂ ಸಂಶೋಧನೆ ಮತ್ತು ಪಂಚಾಯತ ರಾಜ್ ಸಿಬ್ಬಂದಿ ಹಾಗೂ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರಿಗೆ ತರಬೇತಿ ಮತ್ತು ಮನಶ್ಚೇತನ ಶಿಬಿರಗಳು ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. |

| | | |
|---|---|---|
| (ಇ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕರ್ನಾಟಕದಲ್ಲಿ ಎಷ್ಟು ಗ್ರಾಮಗಳನ್ನು ಪರಂಪರಾಗತ ಗ್ರಾಮಗಳೆಂದು ಗುರುತಿಸಿರುತ್ತದೆ; (ವಿವರಗಳನ್ನು ನೀಡುವುದು) ಇವುಗಳ ಪುನರ್ ನಿರ್ಮಾಣಕ್ಕೆ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿರುತ್ತದೆ. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪಾರಂಪರಿಕ ಗ್ರಾಮಗಳನ್ನು ಗುರುತಿಸುವ ಕಾರ್ಯವನ್ನು ನಿರ್ವಹಿಸುತ್ತಿರುವುದಿಲ್ಲ. |
| (ಈ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕರ್ನಾಟಕದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 07.04.2016 ರಿಂದ ಎಷ್ಟು ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಿರುತ್ತದೆ; ವಾರ್ಷಿಕ ಎಷ್ಟು ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಅಭಿವೃದ್ಧಿ ಪಡಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ? | ರಾಜ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2016–17ನೇ ಸಾಲಿಗೆ 20000 ಎಕರೆ ತೋಟಗಾರಿಕೆ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, 21740 ಎಕರೆ ಪ್ರಗತಿಯಾಗಿರುತ್ತದೆ. 2017–18ನೇ ಸಾಲಿಗೆ 25000 ಎಕರೆ ಗುರಿ ನಿಗಧಿಪಡಿಸಲಾಗಿದ್ದು, ಇಲ್ಲಿಯವರೆವಿಗೂ 20145 ಎಕರೆ ಪ್ರಗತಿಯಾಗಿದೆ. ದಿನಾಂಕ:07–04–2016 ರಿಂದ ಇಲ್ಲಿಯ ವರೆವಿಗೂ ಒಟ್ಟು 45000 ಎಕರೆ ಪ್ರದೇಶ ವಿಸ್ತರಣಾ ಕಾರ್ಯಕ್ರಮದ ಗುರಿಗೆ 41885 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. |

**ಸಂಖ್ಯೆ: ಗ್ರಾಅಪ 56 ಜಿಪಸ 2018**

(ಎಚ್.ಕೆ. ಪಾಟೀಲ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

23/2118

VLS

# ಕರ್ನಾಟಕ ವಿಧಾನ ಪರಿಷತ್ತು

13

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1137

ಉತ್ತರ ದಿನಾಂಕ : 23.02.2018

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರು ಘಟಕವನ್ನು ನಿರ್ಮಿಸಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವಾಗ ಶುದ್ಧ ನೀರಿನ ಘಟಕವನ್ನು ನಿರ್ಮಿಸಲಾಗುವುದು : (ಸಂಪೂರ್ಣ ವಿವರ ನೀಡುವುದು) | ಕಾಡೇನಹಳ್ಳಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಅಳವಡಿಸಲು ಟೆಂಡರ್ ಆಧಾರದ ಮೇಲೆ ಶ್ರೀ.ಬಿ.ಹೆಚ್.ಕೃಷ್ಣರೆಡ್ಡಿರವರಿಗೆ ದಿನಾಂಕ:25.01.2018ರಂದು ವಹಿಸಲಾಗಿದ್ದು. ಕಾಮಗಾರಿ ಪ್ರಗತಿಯಲ್ಲಿದೆ. ಟೆಂಡರ್ ಕರಾರಿನ/ ಗುತ್ತಿಗೆ ಪ್ರಾಕಾರ 45 ದಿನಗಳಲ್ಲಿ ನೀರು ಶುದ್ಧಿಕರಣ ಘಟಕಗಳನ್ನು ಅಳವಡಿಸಬೇಕಾಗಿರುತ್ತದೆ. |
| ಆ) | ಜಕ್ಕನಹಳ್ಳಿ ಗ್ರಾಮ ಪಂಚಾಯತ್ ಅಡಿಯಲ್ಲಿ ಎಷ್ಟು ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಘಟಕವನ್ನು ನಿರ್ಮಿಸಲಾಗುವುದು? (ಹಳ್ಳಿವಾರು ಸಂಪೂರ್ಣ ವಿವರ ನೀಡುವುದು) | ಜಕ್ಕನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 12 ಗ್ರಾಮಗಳಿದ್ದು, 06 ಹಳ್ಳಿಗಳಲ್ಲಿ ಶುದ್ದ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದ್ದು,3ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಗಳನ್ನು ಅಳವಡಿಸುವ ಕೆಲಸ ಪ್ರಗತಿಯಲ್ಲಿವೆ.ಗ್ರಾಮವಾರು ವಿವರಗಳು ಕೆಳಕಂಡಂತೆ ಇರುತ್ತವೆ. |

| ಗ್ರಾಮ ಪಂಚಾಯಿತಿ ಹೆಸರು | ಗ್ರಾಮಗಳ ಹೆಸರು |
|---|---|
| ಈಗಾಗಲೇ ಶುದ್ಧ ಕುಡಿಯುನ ನೀರಿನ ಘಟಕಗಳನ್ನು ಅಳವಡಿಸಿರುವ ಗ್ರಾಮಗಳು. | |
| ಜಕ್ಕನಹಳ್ಳಿ | ಸಂಗಾಪುರ |
| ಜಕ್ಕನಹಳ್ಳಿ | ಜಕ್ಕನಹಳ್ಳಿ |
| ಜಕ್ಕನಹಳ್ಳಿ | ಅಮೃತಿ |
| ಜಕ್ಕನಹಳ್ಳಿ | ನ್ಯಾಮನಹಳ್ಳಿ |
| ಜಕ್ಕನಹಳ್ಳಿ | ಶಂಭೂನಹಳ್ಳಿ |
| ಜಕ್ಕನಹಳ್ಳಿ | ಕದಲಗೆರೆ |
| ಶುದ್ಧ ಕುಡಿಯುನ ನೀರಿನ ಘಟಕಗಳನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುವ ಗ್ರಾಮಗಳು. | |
| ಜಕ್ಕನಹಳ್ಳಿ | ಕಾಡೇನಹಳ್ಳಿ |
| ಜಕ್ಕನಹಳ್ಳಿ | ಅರಕನಹಳ್ಳಿ |
| ಜಕ್ಕನಹಳ್ಳಿ | ಜಕ್ಕನಹಳ್ಳಿ(2ನೇ ಘಟಕ) |

ಸಂ:ಗ್ರಾಅಪ 55 ಗ್ರಾನೀಸ(6) 2018

(ಎಚ್.ಕೆ. ಪಾಟೀಲ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು